## *01.01.2019 ನೇ ಸಾಲಿನ ಜೇಷ್ಠತಾ ಪಟ್ಟಿಯ ಆಕ್ಷೇಪಣೆಗಳ ವಿವರ : 18.03.2018*

### 1. ಅರವಳಿಕೆ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಅಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ: ನೇತ್ರಾ ಹೆಚ್.ಎನ್ | 01.01.2019 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ವಿಭಾಗದ ಜೇಷ್ಠತೆಯ ಸಂಬಂಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No. 1883-1891/2018 ರಂತೆ ದಾವೆ ಹೂಡಿರುವುದರಿಂದ ನ್ಯಾಯಾಲಯದ ಅಂತಿಮ ಆದೇಶ ಬರಬೇಕಿದೆ ಎಂದು ಷರಾದಲ್ಲಿ ನಮೂದಾಗಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯವು ದಾಖಲಿಸಿಕೊಂಡಿರುವುದಿಲ್ಲ.<br>ಆದ್ದರಿಂದ ಜೇಷ್ಠತಾ ಪಟ್ಟಿಯಲ್ಲಿ ನಮೂದಾಗಿರುವ ಷರಾವನ್ನು ತೆಗೆದುಹಾಕಬೇಕೆಂದು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ,<br>1. ಈ ಸಂಸ್ಥೆಯ ಆದೇಶ ಸಂಖ್ಯೆ: ಬೆಂವೈವಿಸಂಸಂ/ಸಿ(1)/53/12–13 28.08.2012 ರ ಆದೇಶದಲ್ಲಿ<br>1. ಡಾ॥ ನೇತ್ರಾ H.N,<br>2. ಡಾ॥ ರಾಘವೇಂದ್ರ B.S,<br>3. ಡಾ॥ ಸರಸ್ವತಿ S,<br>ಇವರುಗಳು ಈ ಸಂಸ್ಥೆಯಿಂದಲೇ ನೇಮಕಾತಿಗೊಂಡಿರುತ್ತಾರೆ.<br>2. ಬೆಂವೈವಿಸಂಸಂ/ಸಿಬ್ಬಂದಿ(1)/18/2015–16 , dt: 22.09.2015 ರಲ್ಲಿ ಸದರಿ ವೈದ್ಯರುಗಳ ಖಾಯಂ ಪೂರ್ವಸೇವಾವಧಿಯನ್ನು ಈ ಸಂಸ್ಥೆಯಿಂದಲೇ ಘೋಷಿಸಲಾಗಿರುತ್ತದೆ.<br>3. ದಿನಾಂಕ:21.09.2016 ರಂದು ನಡೆದ ಆಡಳಿತ ಪರಿಷತ್ ಸಭೆಯಲ್ಲಿ **"PMSSY ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸಹ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ & ಸಂಶೋಧನಾ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಲಾಗಿರುತ್ತದೆ."**<br>4. ಈ 3 ವೈದ್ಯರ ಹೆಸರನ್ನು ಈ ಸಂಸ್ಥೆಯ ಜೇಷ್ಠತೆಯಲ್ಲಿ ಸೇರಿಸಿರುವುದನ್ನು ಪ್ರಶ್ನಿಸಿ ಈ ಸಂಸ್ಥೆಯ ಅರವಳಿಕೆ ಶಾಸ್ತ್ರ ವಿಭಾಗದ ಕೆಲವು ವೈದ್ಯರುಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No. 1883-1891/2018 ರಂತೆ ದಾವೆ ಹೂಡಿರುತ್ತಾರೆ.<br>2018 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಈ ಅಂಶವನ್ನು ಷರಾದಲ್ಲಿ ದಾಖಲಿಸಲಾಗಿದೆ. | ಅರವಳಿಕೆ ಶಾಸ್ತ್ರ ವಿಭಾಗದ 3 ವೈದ್ಯರ ಜೇಷ್ಠತಾ ಸಂಬಂಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No. 1883-1891/2018 ರಲ್ಲಿ ಪ್ರಕರಣ ಹೂಡಿರುವುದರಿಂದ ಮುಂದಿನ ಅಂತಿಮ ಆದೇಶ ಬರಬೇಕಾಗಿದ್ದು, ಜೇಷ್ಠತಾ ಪಟ್ಟಿಯ ಷರಾದಲ್ಲಿ ನಮೂದಾಗಬೇಕೆಂದು ತೀರ್ಮಾನಿಸಿದೆ.<br>ವೈದ್ಯರ ಮನವಿಯನ್ನು ತಿರಸ್ಕರಿಸಲಾಗಿದೆ. |
| 2 | ಡಾ: ಸರಸ್ವತಿ ಎಸ್ | | | |
| 3 | ಡಾ: ರಾಘವೇಂದ್ರ ಬಿ.ಎಸ್ | | | |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1<br>2<br>3<br>4<br>5 | ಡಾ॥ ಸತೀಶ್ ಕುಮಾರ್ ಎಂ.ಎನ್<br>ಡಾ॥ ಸೌಮ್ಯ ರೋ ಹಿತ್<br>ಡಾ॥ ರಂಜಿತಾ ಗಂಗಾಧರಯ್ಯ<br>ಡಾ. ಹರ್ಷವರ್ಧನ್ ಹೆಚ್.ಎಸ್<br>ಡಾ॥ ಮಧುಮಾಲ ಹೆಚ್.ಆರ್ | ಆಕ್ಷೇಪಣೆ ಕ್ರಮ ಸಂಖ್ಯೆ: 1 ರಂತೆ ಅರವಳಿಕೆ ಶಾಸ್ತ್ರ ವಿಭಾಗದ 3 ವೈದ್ಯರುಗಳು 01.01.2019 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ವಿಭಾಗದ ಜೇಷ್ಠತೆಯ ಸಂಬಂಧ ಮಾನ್ಯ ಉಚ್ಚನ್ಯಾಯಾಲಯದ WP No. 1883-1891/2018 ರಂತೆ ದಾವೆ ಹೂಡಿರುವುದರಿಂದ ಮಾನ್ಯ ಉಚ್ಚನ್ಯಾಯಾಲಯದ ಅಂತಿಮ ಆದೇಶ ಬರಬೇಕಿದೆ ಎಂಬುದಾಗಿರುವ ಷರಾವನ್ನು ತೆಗೆದುಹಾಕಬೇಕೆಂದು ಕೋರಿರುವ ಮನವಿಯನ್ನು ತಿರಸ್ಕರಿಸಬೇಕೆಂದು ಮತ್ತು ಮಾನ್ಯ ಉಚ್ಚನ್ಯಾಯಾಲಯದ ಅಂತಿಮ ಆದೇಶ ಬರುವವರೆಗೂ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ಕೋರಿರುತ್ತಾರೆ. | 1. ಈ ಸಂಸ್ಥೆಯ ಆದೇಶ ಸಂಖ್ಯೆ: ಬೆಂವೈವಿಸಂಸಂ/ಸಿ(1)/53/12-13 28.08.2012 ರ ಆದೇಶದಲ್ಲಿ<br>1. ಡಾ॥ ನೇತ್ರಾ H.N,<br>2. ಡಾ॥ ರಾಘವೇಂದ್ರ B.S,<br>3. ಡಾ॥ ಸರಸ್ವತಿ S,<br>ಇವರುಗಳು ಈ ಸಂಸ್ಥೆಯಿಂದಲೆ ನೇಮಕಾತಿಗೊಂಡಿರುತ್ತಾರೆ.<br>2. ಬೆಂವೈವಿಸಂಸಂ/ಸಿಬ್ಬಂದಿ(1)/18/2015-16 , dt: 22.09.2015 ರಲ್ಲಿ ಸದರಿ ವೈದ್ಯರುಗಳ ಖಾಯಂ ಪೂರ್ವಸೇವಾವಧಿಯನ್ನು ಈ ಸಂಸ್ಥೆಯಿಂದಲೇ ಘೋಷಿಸಲಾಗಿರುತ್ತದೆ.<br>3. ದಿನಾಂಕ:21.09.2016 ರಂದು ನಡೆದ ಆಡಳಿತ ಪರಿಷತ್ ಸಭೆಯಲ್ಲಿ **"PMSSY ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸಹ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ & ಸಂಶೋಧನಾ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಲಾಗಿರುತ್ತದೆ."**<br>4. ಈ 3 ವೈದ್ಯರ ಹೆಸರನ್ನು ಈ ಸಂಸ್ಥೆಯ ಜೇಷ್ಠತೆಯಲ್ಲಿ ಸೇರಿಸಿರುವುದನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No. 1883-1891/2018 ದಾವೆ ಹೂಡಿರುತ್ತಾರೆ.<br>2018 ರ ಜೇಷ್ಠತಾ ಪಟ್ಟಿಯಲ್ಲಿ ಈ ಅಂಶವನ್ನು ನಮೂದಿಸಲಾಗಿದೆ. | ಅರವಳಿಕೆ ಶಾಸ್ತ್ರ ವಿಭಾಗದ 3 ವೈದ್ಯರ ಜೇಷ್ಠತಾ ಸಂಬಂಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No. 1883-1891/2018 ಹೂಡಿರುವುದರಿಂದ ಮುಂದಿನ ಅಂತಿಮ ಆದೇಶ ಬರಬೇಕಾಗಿದ್ದು, ಜೇಷ್ಠತಾ ಪಟ್ಟಿಯ ಷರಾದಲ್ಲಿ ನಮೂದಾಗಬೇಕೆಂದು ತೀರ್ಮಾನಿಸಿದೆ.<br>ವೈದ್ಯರ ಮನವಿಯನ್ನು ಪರಿಗಣಿಸಬಹುದು. |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು

# 2. ಅಸ್ಥಿಚಿಕಿತ್ಸಾ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಅಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ. ಕೆ.ಜಿ ಗೋಪಾಲಕೃಷ್ಣ ಸಹಾಯಕ ಪ್ರಾಧ್ಯಾಪಕರು. ಅಸ್ಥಿ ಚಿಕಿತ್ಸಾ ವಿಭಾಗ. | ಸದರಿ ವೈದ್ಯರ ಜೇಷ್ಠತೆಗೆ ಸಂಬಂಧಿಸಿದಂತೆ ಪ್ರಕರಣವು ಘನ ಉಚ್ಚ ನ್ಯಾಯಾಲಯದ ಸಂಖ್ಯೆ: WP No. 46497/2016 (S-RES) ರನ್ವಯ ದಿನಾಂಕ: 31.08.2018 ರಲ್ಲಿ ಹೊರಬಿದ್ದ ತೀರ್ಪಿನಂತೆ ಸೇವಾ ಸೌಲಭ್ಯಗಳನ್ನು ದಿನಾಂಕ: 28.02.2009 ರಿಂದಲೇ ಪರಿಗಣಿಸಬೇಕೆಂದು ಕೋರಿಕೆ ಇದ್ದಾಗ್ಯೂ, ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನನ್ನ ಜೇಷ್ಠತೆಯನ್ನು ಡಾ: ಸೋಮಶೇಖರ್ ಗಿಂತ ಕೆಳಗೆ ಇರಿಸಿರುತ್ತೀರಿ. ಇದನ್ನು ಸರಿಪಡಿಸಬೇಕೆಂದು ಕೋರಿರುತ್ತಾರೆ. | ಇದಕ್ಕೆ ಸಂಬಂಧಿಸಿದಂತೆ, ದಿನಾಂಕ: 14.01.2016 ರ ಏಕ ಕಡತದಲ್ಲಿ ಸರ್ಕಾರಕ್ಕೆ ಸೂಕ್ತ ಆದೇಶವನ್ನು ನೀಡುವಂತೆ ಕೋರಿ ಟಿಪ್ಪಣಿ ಸಲ್ಲಿಸಲಾಗಿತ್ತು. ಸರ್ಕಾರದಿಂದ ಅದೇ ಕಡತವನ್ನು ಸಿಬ್ಬಂದಿ ಮತ್ತು ಆಡಳಿತಾ ಸುಧಾರಣಾ ಇಲಾಖೆಗೆ ಅಭಿಪ್ರಾಯಕ್ಕಾಗಿ ಸಲ್ಲಿಸಲಾಗಿದ್ದು, ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.<br>**" ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16(ಎ)(ii) ರನ್ವಯ, ಈ ನಿಯಮಗಳಲ್ಲಿ ಮತ್ತು ಸಂಬಂಧಿಸಿದ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಸರ್ಕಾರ ಕಾರಣಗಳನ್ನು ಲಿಖಿತ ಮೂಲಕ ದಾಖಲಿಸಿ ಸರ್ಕಾರದ ಒಂದು ಇಲಾಖೆಯ ನೌಕರರನ್ನು ಇನ್ನೊಂದು ಇಲಾಖೆಯ ಸಮನಾಂತರ ಹುದ್ದೆಗೆ ವರ್ಗಾವಣೆ ಮುಖಾಂತರ ನೇಮಕಾತಿಯನ್ನು ಮಾಡಲು ಆಸ್ಪದವಿರುತ್ತದೆ. ಈ ನಿಯಮದನ್ವಯ ವರ್ಗಾವಣೆ ಮುಖಾಂತರ ನೇಮಕಾತಿಯನ್ನು ಭವಿಷ್ಯವರ್ತಿಯಾಗಿ ಜಾರಿಗೆ ಬರುವಂತೆ ಮಾಡಬಹುದಾಗಿರುತ್ತದೆ. ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ವರ್ಗಾವಣೆ ಮುಖಾಂತರ ನೇಮಕಾತಿಯನ್ನು ಮಾಡಲು ಅವಕಾಶವಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ಇದರಂತೆ ಸದರಿ ವೈದ್ಯರಿಗೆ ಸಂಸ್ಥೆಯಿಂದ ಹಿಂಬರಹ ಪತ್ರ ನೀಡಲಾಗಿರುತ್ತದೆ.**<br><br>ಡಾ: ಕೆ.ಜಿ ಗೋಪಾಲಕೃಷ್ಣ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಿನಾಂಕ: 31.08.2018 ರಂದು ದಾಖಲಿಸಿದ್ದು ನ್ಯಾಯಾಲಯವು ಈ ಕೆಳಕಂಡಂತೆ ತೀರ್ಪನ್ನು ನೀಡಿರುತ್ತಾರೆ.<br>"Learned counsel for the petitioner restricts his petition only for a plea of mandamus to direct respondent No. 3 to consider his representations. The representations have been produced vide Annexures – E1 to E6. In fact, the last of the representations is of the year 2016. Therefore, petitioner's counsel pleads that he may be permitted to file a fresh representation for the consideration by the respondents.<br>Learned counsel for Respondent No. 3 submits that if such a representation is made, the same will be considered in accordance with law.<br>In view of the submissions made, the Writ Petition is disposed off, with a direction to respondent No. 3 to consider the proposed representation of the petitioner, in accordance with law." | ಸದರಿ ವೈದ್ಯರು ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ: WP No. 46497/2016 (S-RES) ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ನ್ಯಾಯಾಲಯದ ಅಂತಿಮ ಆದೇಶ ಬಾಕಿ ಇರುತ್ತದೆ.<br><br>ಸದರಿ ಗೊಂದಲದ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಮುಂದಿನ ಆದೇಶವನ್ನು ನಿರೀಕ್ಷಿಸಲಾಗಿರುತ್ತದೆ |

ಮುಂದುವರೆಯುತ್ತದೆ.
4.....

| | | | | |
|---|---|---|---|---|
| | | | ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸುತ್ತಾ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕಾನೂನು ರೀತ್ಯಾ ಅಭಿಪ್ರಾಯ ನೀಡಲು ಸಂಸ್ಥೆಯ ಕಾನೂನು ಸಲಹೆಗಾರರನ್ನು ಕೋರಲಾಗಿದ್ದು, ಈ ಕೆಳಕಂಡಂತೆ ಅಭಿಪ್ರಾಯಿಸಿರುತ್ತಾರೆ.<br><br>"ಸೇವಾ ಹಿರಿತನದ ಬಗ್ಗೆ ನೀಡಿರುವ ಸ್ಪಷ್ಟನೆಯಂತೆ ಸರ್ಕಾರದ ಆದೇಶ ದಿನಾಂಕ:28.02.2009 ರ ಆದೇಶದಂತೆ ಯಾವ ನೌಕರರು ಮೊದಲು ವಿಲೀನರಾಗುತ್ತಾರೋ ಅವರು ಮೊದಲ ಜೇಷ್ಠತೆಯನ್ನು ಹೊಂದುತ್ತಾರೆ. ಈ ಪ್ರಕರಣದಲ್ಲಿ ಡಾ: ಎಸ್.ಎ ಸೋಮಶೇಖರ್ ರವರು ಮೊದಲು ವಿಲೀನರಾಗಿದ್ದು ಕ್ರಮ ಸಂಖ್ಯೆ: 10 ರಲ್ಲಿರುತ್ತಾರೆ. ಸರ್ಕಾರದ ದಿನಾಂಕ: 06.01.2010 ರಂದು ಮತ್ತೊಂದು ಸೇರ್ಪಡೆ ಆದೇಶ ನೀಡಿದ್ದು ಇದರಲ್ಲಿ . ಡಾ: . ಕೆ.ಜಿ ಗೋಪಾಲಕೃಷ್ಣ ರವರು ಕ್ರಮ ಸಂಖ್ಯೆ: 29 ರಲ್ಲಿರುತ್ತಾರೆ.<br><br>ಡಾ: ಕೆ.ಜಿ ಗೋಪಾಲಕೃಷ್ಣ ರವರ ವಿಲೀನಾತಿಗೆ ದಿನಾಂಕ: 04.07.2008 ರಂದು ಪ್ರಸ್ತಾವನೆ ಕಳುಹಿಸುವ ಸಮಯದಲ್ಲಿ ಇವರು DNB ಪದವಿಯನ್ನು MD/MS ಸ್ನಾತ್ತಕೋತ್ತರ ಪದವಿಗೆ ಸಮಾನಂತರವೆಂದು ಘೋಷಿಸಿರುವುದಿಲ್ಲ. MCI ರವರು ದಿನಾಂಕ: 24.07.2009 ರಂದು DNB ಪದವಿಯನ್ನು MD/MS ಸ್ನಾತ್ತಕೋತ್ತರ ಪದವಿಗೆ ಸಮಾನಂತರವೆಂದು ಪರಿಗಣಿಸಿ ಪ್ರಕಟಣೆ ನೀಡಿರುತ್ತಾರೆ.<br><br>ಆದರೆ ಡಾ: ಎಸ್.ಎ ಸೋಮಶೇಖರ್ ಇವರು MS ಸ್ನಾತ್ತಕೋತ್ತರ ಪದವಿಯನ್ನು ಹೊಂದಿದ್ದು, ಅವರ ಸೇವೆಯನ್ನು ದಿನಾಂಕ: 28.02.2009 ರಿಂದಲೇ ವಿಲೀನ ಹೊಂದಲು ಸರ್ಕಾರದ ಆದೇಶವಾಗಿರುವುದು. ಮುಂದುವರೆದು ಡಾ: ಕೆ.ಜಿ ಗೋಪಾಲಕೃಷ್ಣ ರವರ ವಿಲೀನಾತಿಯು ದಿನಾಂಕ: 06.01.2010 ರಂದು ಆಗಿರುವುದರಿಂದ ನಿಯಮಾನುಸಾರ ಡಾ: ಎಸ್.ಎ ಸೋಮಶೇಖರ್ ಇವರು ಜೇಷ್ಠತೆಯಲ್ಲಿ ಡಾ: ಕೆ.ಜಿ ಗೋಪಾಲಕೃಷ್ಣ ರವರಿಗಿಂತ ಹಿರಿತನ ಹೊಂದುವರು.<br><br>ಒಪ್ಪಿದರೆ ಡಾ: ಕೆ.ಜಿ ಗೋಪಾಲಕೃಷ್ಣ ರವರಿಗೆ ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನದಂತೆ ಸದರಿಯವರ ಅರ್ಜಿಯ ಮೇಲೆ ಮೇಲಿನ ಮಾಹಿತಿಯಂತೆ ಹಿಂಬರಹ ನೀಡಬಹುದು" ಎಂದು ಅಭಿಪ್ರಾಯಿಸಿ ಪತ್ರ ನೀಡಿರುತ್ತಾರೆ. | |
| | | | ಮೇಲ್ಕಂಡ ಎಲ್ಲಾ ಅಂಶಗಳನ್ನು ಸರ್ಕಾರದ ಗಮನಕ್ಕೆ ತರುತ್ತಾ ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸದರಿ ವೈದ್ಯರುಗಳ ಜೇಷ್ಠತೆಯ ಬಗ್ಗೆ ಸೂಕ್ತ ನಿರ್ದೇಶನವನ್ನು ಕೋರಿ ದಿನಾಂಕ: 12.03.2019 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. | |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು

## 3. ಯುರಾಲಜಿ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ. ಸುಜಿತ್ ಕಣ್ಣನ್ ಸಹಾಯಕ ಪ್ರಾಧ್ಯಾಪಕರು. ಯುರಾಲಜಿ ವಿಭಾಗ. | 01.03.2018 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಡಾ: ಸುಜಿತ್ ಕಣ್ಣನ್ ಇವರು ಆಕ್ಷೇಪಣೆಯನ್ನು ಸಲ್ಲಿಸಿದ್ದು, 2017 ನೇ ಸಾಲಿನಲ್ಲಿ ಈ ಸಂಸ್ಥೆಯ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡು ದಿನಾಂಕ: 27.01.2017 ರಂದು ಯುರಾಲಜಿ ವಿಭಾಗಲ್ಲೆ ನೇಮಕಗೊಂಡಿರುತ್ತೇನೆ. ಆ ಸಂಧರ್ಭದಲ್ಲಿ ವಿಭಾಗದಲ್ಲಿ ಗುತ್ತಿಗೆ ವೈದ್ಯರಾದ ಡಾ: ಎ.ಜೆ. ಕಾಮತ್ ರವರು ಮಾತ್ರ ಇರುತ್ತಾರೆ. ನಂತರ 2 ತಿಂಗಳಾದ ಬಳಿಕ ಡಾ: ರೋಹಿತ್ ಜಿ.ಆರ್ ಇವರು ಜನರಲ್ ಸರ್ಜರಿ ವಿಭಾಗದಿಂದ ಯುರಾಲಜಿ ವಿಭಾಗಕ್ಕೆ ವಿಷಯ ಬದಲಾವಣೆ ಹೊಂದಿ ಯುರಾಲಜಿ ವಿಭಾಗಕ್ಕೆ ಹಾಜರಾಗಿರುತ್ತಾರೆ.<br><br>ಆದರೆ ಡಾ: ರೋಹಿತ್ ಜಿ.ಆರ್ ಇವರಿಗೆ ದಿನಾಂಕ: 06.08.2016 ರಿಂದಲೇ ವಿಷಯ ಬದಲಾವಣೆಯೆಂದು ಪಡಿಗಣಿಸಿ ಜೇಷ್ಠತಾ ಪಟ್ಟಿಯಲ್ಲಿ ಕ್ರ.ಸಂ 01 ರಲ್ಲಿ ಇರಿಸಿರುವುದರಿಂದ, ನನ್ನನ್ನು ಅವರಿಗಿಂತ ಹಿರಿಯ ಸ್ಥಾನದಲ್ಲಿರಿಸಬೇಕೆಂದು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ, ಆದೇಶ ಸಂಖ್ಯೆ: ಬೆಂವೈವಿಸಂಸಂ/ಸಿ(1)/62/2009–10 ದಿನಾಂಕ: 02.11.2017 ರಲ್ಲಿ ಡಾ॥ ರೋಹಿತ್ ಜಿ.ಆರ್, ಇವರಿಗೆ ಆಡಳಿತ ಪರಿಷತ್ ಸಭೆಯ ಅನುಮೋದನೆ ದಿನಾಂಕ:28.08.2017 ರಂತೆ ಅವರು ಸೂಪರ್ ಸ್ಪೆಷಾಲಿಟಿ ವ್ಯಾಸಂಗ ಮುಗಿಸಿ ಈ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ: 01.08.2016 ರಿಂದ ಜಾರಿಗೆ ಬರುವಂತೆ ಯಾವುದೇ ಆರ್ಥಿಕ ಹೊರೆ ಇಲ್ಲದೇ ಜನರಲ್ ಸರ್ಜರಿ ವಿಭಾಗದಿಂದ ಯುರಾಲಜಿ ವಿಭಾಗಕ್ಕೆ ವಿಷಯ ಬದಲಾವಣೆ ನೀಡಲು ನಿರ್ಣಯವಾಗಿದ್ದು, ಸದರಿ ವೈದ್ಯರು ಎಂ.ಸಿ.ಹೆಚ್ ಪಾಸಾದ ದಿನಾಂಕ: 06.08.2016 ಆಗಿರುವುದರಿಂದ ದಿನಾಂಕ:06.08.2016 ರಿಂದ ಅನ್ವಯವಾಗುವಂತೆ ವಿಷಯ ಬದಲಾವಣೆ ನೀಡಿ ಯುರಾಲಜಿ ವಿಭಾಗದ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ನೇಮಿಸಿ ಆದೇಶಿಸಿ ಸದರಿ ದಿನಾಂಕದಿಂದ ಸೇವಾ ಹಿರಿತನವನ್ನು ಪರಿಗಣಿಸಲು ಆದೇಶಿಸಿರುತ್ತದೆ. ಇದರಂತೆ ಡಾ॥ ರೋಹಿತ್ ಜಿ.ಆರ್, ಇವರ ಜೇಷ್ಠತೆಯನ್ನು ಹಿರಿಯ ಸ್ಥಾನದಲ್ಲಿರಿಸಲಾಗಿರುತ್ತದೆ. | ಡಾ: ಸುಜಿತ್ ಕಣ್ಣನ್ ಇವರ ಮನವಿಯನ್ನು ತಿರಸ್ಕರಿಸಿದೆ. |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*